# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ಸಂ:ಬಿಬಿಎಂಪಿ/ಸಕಾಅ/ಹೂಉವಿ/WC/2022-23 ದಿನಾಂಕ:23.01.2023

**-:ದಿನಾಂಕ:23.01.2023 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:23.01.2023 ರ ಸೋಮುವಾರ ಬೆಳಗ್ಗೆ 11.00 ಕ್ಕೆ ವಾರ್ಡ್ ನಂ.105 ಬೆಳತ್ತೂರು ಮತ್ತು ವಾರ್ಡ್ ನಂ.106 ಹೂಡಿ, ಹೂಡಿ ಕಾಮಗಾರಿ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ.ಶ್ರೀನಿವಾಸ್ ಮೂರ್ತಿ. | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2 | ಶ್ರೀ.ಎಂ.ಜಗದೀಶ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ ಶ್ರೀನಿವಾಸಯ್ಯ | ಪಿಎಸ್ಐ ಕೆ.ಆರ್.ಪುರಂ | ಹಾಜರಿದ್ದರು. |
| 4 | ಶ್ರೀ ಶಂಕರ್ | ಬಿಳಿಶೀವಾಲೆ | ಹಾಜರಿದ್ದರು. |
| 5 | ಶ್ರೀಹನುಮಪ್ಪ ಬಿ ಸಿ | ಸಾರ್ವಜನಿಕರು | ಹಾಜರಿದ್ದರು. |
| 6 | ಶ್ರೀ ಮಾದೇಶ್ ಎಸ್ ಕೆ | ಸಾರ್ವಜನಿಕರು | ಹಾಜರಿದ್ದರು. |
| 7 | ಶ್ರೀ.ಟಿ ಆರ್ ಸತೀಶ್ | ಅಯ್ಯಪ್ಪನಗರ | ಹಾಜರಿದ್ದರು. |
| 8 | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 9 | ಶ್ರೀಮತಿ.ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 10 | ಶ್ರೀ. ಶೀನ ಕುಮಾರ್ | ಸಾರ್ವಜನಿಕರು | ಹಾಜರಿದ್ದರು. |
| 11 | ಶ್ರೀ ಜಿಂದ್ರಿಶ್ ಬರ | ಸಾರ್ವಜನಿಕರು | ಹಾಜರಿದ್ದರು. |
| 12 | ಶ್ರೀಮತಿ.ಸುಜಾತ ಬಲರಾಮ್ | ಅಯ್ಯಪ್ಪ ನಗರ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಸಾರ್ವಜನಿಕರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತ ಕೋರಿಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳು ಪದೇ ಪದೇ ಗೈರು ಹಾಜರಾಗುವುದನ್ನು ಗಮನಿಸಲಾಯಿತ್ತು

**ಪೋಲೀಸ್ ಇಲಾಖೆ**

1) ವಾರ್ಡ್ ಕಮಿಟಿ ಸಭೆಗೆ ಟ್ರಾಫೀಕ್ ವತಿಯಿಂದ ಯಾರು ಭಾಗವಹಿಸದಿದ್ದನ್ನು ಗಮನಿಸಿದ ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು ಅಸಮದಾನ ವ್ಯಕ್ತಿ ಪಡಿಸಿರುತ್ತಾರೆ. ಮುಂದಿನ ಸಭೆಗೆ ಟ್ರಾಫೀಕ್ ವತಿಯಿಂದ ತಪ್ಪದೆ ಹಾಜರಿರುವಂತೆ ಸಭೆಯಲ್ಲಿ ಕೊರಿದರು.
2) Reliance, Udupi ಮತ್ತು Ecospace ಇತ್ಯಾದಿ ಸ್ಥಳ ರಸ್ತೆಗಳಲ್ಲಿ ಬೇಕಾಬಿಟ್ಟಿಯಾಗಿ ವೆಹಿಕಲ್ಸ್‌ಗಳನ್ನು ಪಾರ್ಕಿಂಗ್ ಮಾಡಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದ್ದು ಇದನ್ನು ನಿಷೆಧಿಸಿ ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಕೊರಿದರು. ಸಂಬಂಧಿಸಿದ ಟ್ರಾಫೀಕ್ ಅಧಿಕಾರಿಗಳು ಗಮನಕ್ಕೆ ತರಲಾಗುವುದು ಎಂದು ವಾರ್ಡ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
3) ಮುಂದಿನ ಸಭೆಗೆ ಕೆ.ಆರ್.ಪುರ, ಭೈರತಿ, ಕೊತ್ತನೂರು ಮತ್ತು ಹೆಣ್ಣೂರು ವ್ಯಾಪ್ತಿಯ, ಟ್ರಾಫೀಕ್ ಮತ್ತು ಲಾ ಅಂಡ್ ಆರ್ಡ್ ಠಾಣಾಧಿಕಾರಿಗಳು ಸಭೆಗೆ ಹಾಜರಿರುವಂತೆ ಕೊರಿದರು.

**ಕ್ರಂ.ಸಂ 1 ರಿಂದ 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ಹಾಜರಾಗಲು ತಿಳಿಸಲಾಯಿತ್ತು.**

**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

**ಘನತ್ಯಾಜ್ಯ ನಿರ್ವಹಣೆ**

1) ಹಿರಿಯ ಆರೋಗ್ಯ ಪರಿವೀಕ್ಷಕರು ರವರು ರಸ್ತೆ ಬದಿಯಲ್ಲಿ ಇಟ್ಟಿರುವ ಅಂಗಡಿ ಮುಗ್ಗಂಟ್ಟುಗಳಿಗೆ. ನೀಡಿರಬಹುದಾದ **License** ಬಗ್ಗೆ ಪರಿಶೀಲಿಸಿ ಕ್ರಮಜರುಗಿಸಲು ಸಭೆಯಲ್ಲಿ ಕೋರಿದರು.
2) ಬಿಳೆಶಿವಾಲೆ ಶಂಕರವರು, ಬಿಳೆಶಿವಾಲೆ ಅಡ್ಡರಸ್ತೆಗಳಲ್ಲಿ ಸರಿಯಾಗಿ ಕಸಗುಡಿಸುತ್ತಿಲ್ಲವೆಂದು ತಿಳಿಸಿದರು ಸದರಿ ವಿಷಯವನ್ನು ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಗಮನಕ್ಕೆ ತಂದು ಸೂಕ್ತ ಕ್ರಮವಹಿಸುವಂತೆ ತಿಳಿಸಲಾಯಿತ್ತು.

(ಕ್ರಮ. ಎಇಇ (ಘನತ್ಯಾಜ್ಯ), ಹಿ.ಆ.ಪ, ಕಿ.ಆ.ಪ)

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಭ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ